ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಕಮ್ಯೂನಿಟಿ ಸೆಂಟರ್ ಬಿಲ್ಡಿಂಗ್‌ಗಳನ್ನು ಕಟ್ಟಲು ಕೇವಲ ೫ ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿರುತ್ತಾರೆ. ಆದರೆ ಈಗಿರತಕ್ಕ ಎಸ್ಟಿಮೇಟ್ ಪ್ರಕಾರ ಪೆಡ್ಯೂಲ್ಡ್ ರೇಟ್ಸ್‌ನ್ನು ನೋಡಿದರೆ ಅದು ಸಾಲುವುದಿಲ್ಲ. ಈಗಿನ ಪರಿಸ್ಥಿತಿಗೆ ಅನುಗುಣವಾಗಿ ಅದನ್ನು ರಿವೈಸ್‌ಮಾಡಿ ಅದನ್ನು ೧೦ ಸಾವಿರ ರೂಪಾಯಿಗಳನ್ನು ಮಾಡಿ ಆ ಸೆಂಟರ್‌ಗಳಿಗೆ ನೀರಿನ ವ್ಯವಸ್ಥೆ ವಿದ್ಯುಚ್ಛಕ್ತಿಯ ವ್ಯವಸ್ಥೆಯನ್ನೆಲ್ಲಾ ನಮೂದು ಮಾಡಿ ನೋಡಿದರೆ ಈಗ ಏನು ೫ ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಮಾಡಿದ್ದಾರೆ ಅದು ಸಾಲುವುದಿಲ್ಲ ; ಅದದ್ದು ಹೆಚ್ಚಿಸುವುದಕ್ಕೆ ಯೋಜನೆ ಮಾಡುತ್ತೀರಾ ಸ್ವಾಮಿ ?

SRI N. RACHAIAH.—Government will consider the suggestion to increase the amount upto Rs. 10,000.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯಂಡ್ಯ.—ಒಂದು ಕ್ಷೇತ್ರದಲ್ಲಿ ಒಂದು ಕಮ್ಯೂನಿಟಿ ಸೆಂಟರ್ ಮಾಡಬೇಕಾದರೆ ಅಲ್ಲಿನ ಅನುಕೂಲ ಮತ್ತು ಅನಾನುಕೂಲಗಳು ಯಾವುದು ಎಂಬುದನ್ನು ಯೋಚನೆ ಮಾಡಿ ಮಾಡುತ್ತೀರಾ ? ಅದನ್ನು ಮಾಡುವಾಗ ಯಾವ ಏಜೆನ್ಸಿ ಮೂಲಕ ಮಾಡಿಸುತ್ತೀರಿ ಎಂದು ತಿಳಿಸುತ್ತೀರಾ ?

ಶ್ರೀ ಎನ್. ರಾಚಯ್ಯ.—ಯಾವ ಕ್ಷೇತ್ರದಲ್ಲೇ ಆಗಲಿ ಕಮ್ಯೂನಿಟಿ ಸೆಂಟರ್‌ಗಳನ್ನು ಕಟ್ಟಬೇಕಾದರೆ ಅಲ್ಲಿ ಕನಿಷ್ಟ ೩೦ ಹರಿಜನರ ಸಂಸಾರಗಳು ಇರಬೇಕು. ಅಲ್ಲಿ ಒಳ್ಳೆಯ ವಾತಾವರಣ ಇರಬೇಕು ಮತ್ತು ಸರಿಯಾದ ನಿವೇಶನ ಇರಬೇಕು. ನಾವು ಸರ್ಕಾರದವರು ಮಂಜೂರ್ ಮಾಡುವಂತಹ ಕಾಲಕ್ಕೆ ತಾಲ್ಲೂಕು ಬೋರ್ಡ್ ಎಜೆನ್ಸಿ ಮೂಲಕ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಕಮ್ಯೂನಿಟಿ ಸೆಂಟರ್‌ನ ಮೇಲ್ವಿಚಾರಣೆಯನ್ನು ಯಾರು ನೋಡಿಕೊಳ್ಳುತ್ತಾರೆ? ಅಲ್ಲಿ ಯಾವಯಾವ ಕಾರ್ಯಕ್ರಮಗಳನ್ನು ನಡೆಸಬೇಕು ಎಂದು ನಿರ್ಧಾರ ಮಾಡಿದ್ದೀರಿ ?

ಶ್ರೀ ಎನ್. ರಾಚಯ್ಯ.—ಕಮ್ಯೂನಿಟಿ ಸೆಂಟರ್‌ಗಳು ಅಲ್ಲಿನ ಸಾರ್ವಜನಿಕರ ಉಪಯೋಗಕ್ಕಾಗಿ ಅಂದರೆ ಸಾರ್ವಜನಿಕರು ಯಾವುದಾದರೂ ಮೀಟಿಂಗ್ ನಡೆಸಬೇಕಾದರೆ, ಯಾವುದಾದರೂ ಎಲೆಕ್ಷನ್ ಬಗ್ಗೆ ಸಭೆ ಸೇರಬೇಕಾದರೆ ನಮಂಥವರು ಆ ಸ್ಥಳಗಳಿಗೆ ಹೋದಾಗ ನಮ್ಮನ್ನು ಸೇರಿಸಿ ಅಲ್ಲಿ ಪಬ್ಲಿಕ್ ಮೀಟಿಂಗ್‌ಗಳನ್ನು ಅಡ್ರೆಸ್ ಮಾಡಲು ಅದರ ಅನುಕೂಲಕ್ಕೆ ಮತ್ತು ಯಾವುದಾದರೂ ಸಮಾರಂಭಗಳು ನಡೆಸಬೇಕಾದರೆ ಅದರ ಅನುಕೂಲಕ್ಕೆ ಅದನ್ನು ಬಳಸಿಕೊಳ್ಳಬಹುದು ಈಗ ಸರ್ಕಾರದವರು ಕೆಲವು ಕಡೆ ಶಿಶುವಿಹಾರಗಳನ್ನು ನಡೆಸುವುದಕ್ಕೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಎಲ್ಲೆಲ್ಲಿ ಸಾಕಾದಷ್ಟು ವಸತಿ ಸೌಕರ್ಯ ಸ್ಕೂಲುಗಳನ್ನು ನಡೆಸಲು ಇರುವುದಿಲ್ಲ ಅಂಥ ಕಡೆ ಶಿಶುವಿಹಾರಗಳನ್ನು ನಡೆಸುತ್ತಿದ್ದಾರೆ. ಇದರ ಮೇಲ್ವಿಚಾರಣೆಯನ್ನು ತಾಲ್ಲೂಕು ಬೋರ್ಡಿಗೆ ವಹಿಸುತ್ತೇವೆ.

SRI DODDATHIMMAIAH.—May I know on what basis you select villages for construction of these community halls and will the Government think of distributing these community centers equitably throughout the State ?

MADAM SPEAKER.—That question does not arise.

SRI PRABHAKAR TELKAR.—In reply to (c) it is stated that Rs. 1,00,000 each is provided in the Budget. Is it for the constituency ?

SRI N. RACHAIAH.—It is not earmarked for the constituency of the hon. member. It is for the entire State. If the amount is inadequate the Government will increase it during the current year.

Reservation of posts belonging to persons belonging to S.C./S.T.

64 SRI K. SIDDAIAH.—(Santhemarahally).—

Will the Chief Minister be pleased to state:—

(*a*) whether it is a fact that the provision for reservation of posts to persons belonging to Scheduled Caste/Schedule Tribe, departmentwise and classwise, has not been observed when combined competitive examinations were held for the purpose of selection of candidates to fill up the vacancies of class I, II and III posts in different services of the State ;

(*b*) if so, whether such decision was taken by Government to give effect to the principle laid down in the decision of the Supreme Court in Devadasan *Vs.* Union of India (AIR 1964 SC 179);

(*c*) if not, the reasons for modifiing the G.O. No. G.A.D. 42. SRR. 69-1 dated 6-9-1969 and delating the provision for reservation of vacancies to Scheduled Caste/Scheduled Tribe people in the posts in Class I, II and III, departmentwise, classwise, categorywise as well as the annexure II to the said G.O. (Classification and otation of vacancies);

(*d*) the basis adopted to judge the suitability of candidates to select them for different departments in State Service under clauses 7(a) and (b) of G. O. No. GAD. 35. SRR. 71 dated 17-5-1971?

SRI D. DEVARAJ URS (Chief Minister) :—

(*a*) Yes ; in such cases reservations are made on the basis of all the vacancies in each class *i.e.* [Class I, Class II or Class III in all the departments pooled together

(*b*) Yes

(*c*) Question does not arise.

(*d*) The number of vacancies in each department, the rank in order of merit secured by the candidates, and the preferences indicated by them constitute the basis for assignment to departments.

SRI K. SIDDAIAH.—The rule laid down in the Supreme Court decision was on no account the reservation in respect of scheduled castes and scheduled tribes should exceed 18% so that it may not create any monopolistic tendency in one class of society. But in the subsequent Government Order the reservation in respect of scheduled castes and scheduled tribes departmentwise and categorywise has been abolished and also the cycle of oppointment is also abolished. These two, abolition of cycle of appintments and abolishing departmentwise and categorywise reservation, are not concerned with the Supreme Court dicision. Will the Government consider to make reservation in respect of the scheduled castes and scheduled tribes departmentwise and categorywise and to restore the cycle of appointments ?

†SRI D. DEVARAJ URS.—So far as the point is concerned, I am afraid the hon.member who has put the question has not been fully apprised of the consequential effect of what he is suggesting, I have no objection to do it. But again tomorrow the moment we revert back to this departmentwise and categorywise reservation, it is the scheduled castes that will be affected. I will prove if you want by calculating how it is going to effect them. In one department if there are three vacancies, the scheduled castes gets only one. If there are two vacancies, nil. I think Sri N. Rachaiah and Sri Mallikarjunswamy know that. So, the privious Government Order is not in conformity with the spirit of the subsequent Supreme Court's decision because, there, it happened the other way. The cycle of appointments and the previous type of reservation resulted in hardship. Supposing it was 33 in number, reservation can be made for scheduled castes and other backward classes. Supposing the number is not 33 but only 13 or 10. The question will be, there will be more reservation than what the constitution provides for. It will not be 18% but 50% some times. So, when we come to know that the privious cycle which was evolved was not in conformity and spirit of the Supreme Court decision, we thought of clubbing all the vacancies. If we take departmentwise and categorywise it is not advantages and I am certain about it, There is only one difficulty or worry here and that is, when all the vacancies are taken into a pool, some people belonging to scheduled castes may not be in position to go to a particular department they desire. I have already discussed this at the cabinet level and I have constituted a small committee to go in to the question and they will shortly come out with a formula whereby this particular difficulty can be overcome. I am sure the hon.member is satisfied with this. If you still insist to go departmentwise I am prepared but tomorrow they should not complain that it has harmed them.

ಶ್ರೀ ಕೆ. ಸಿದ್ದಯ್ಯ.—ಇದರಲ್ಲಿ ಸಬ್ಸಿಕ್ವೆಂಟ್ ಗವರ್ನಮೆಂಟ್ ಆರ್ಡರ್‌ನಲ್ಲಿ ಯಾವಾಗ ಮೂರಂ ವೇಕೆನ್ಸೀಸ್ ಬೀಳುತ್ತವೆಯೋ ಆವಾಗ ಹರಿಜನಗಿರಿಜನರಿಗೆ ಒಬ್ಬರಿಗೆ ಕೊಡಬೇಕು ಎಂದು ಹೇಳಿದ್ದಾರೆ. ಒಂದು ವೇಳೆ, ಒಂದು ಡಿಪಾರ್ಟ್‌ಮೆಂಟಿನಲ್ಲಿ ಎರಡು ವೇಕೆನ್ಸೀಸ್ ಬಿದ್ದವು ಎಂದು ಇಟ್ಟುಕೊಳ್ಳಿ, ಅಂಥ ಸಂದರ್ಭದಲ್ಲಿ ಹರಿಜನಗಿರಿಜನರಿಗೆ ರಿಸರ್ವೇಷನ್ ಸಿಕ್ಕುವುದಿಲ್ಲ. ಆದೇರೀತಿಯಲ್ಲಿ ಎರಡೆರಡು ವೇಕೆನ್ಸಿಗ ಳಂತೆ ೫೦ ಸಾರಿ ಆಡ್ವರ್ಟೈಸ್ ಮಾಡಿದರೆ, ಒಬ್ಬ ಹರಿಜನಗಿರಿಜನರಿಗೂ ಪ್ರಾತಿನಿಧ್ಯ ಸಿಕ್ಕುವುದಿಲ್ಲ. ಆದ್ದ ರಿಂದ ಇದರ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ಡಿ. ದೇವರಾಜ ಅರಸ್.—ಆದಕ್ಕೋಸ್ಕರ ನಾವು ಒಂದು ಪೂಲ್ ಮಾಡಿದರೆ, ಪ್ರತಿಯೊಂದು ಕೆಟಗರಿಯಲ್ಲಿ ಇವರಿಗೆ ೭೦—೩೦ ವೇಕೆನ್ಸಿ ಸಿಕ್ಕುವ ಅವಕಾಶ ಇರುತ್ತದೆ. ತಾವು ಇದನ್ನು ಸ್ವಲ್ಪ ಸಾವ ಧಾನವಾಗಿ ತಿಳಿದುಕೊಳ್ಳಬೇಕು. ಇದು ಸ್ವಲ್ಪ ಕಬ್ಬಿಣದ ಕಡಲೆ, ಅಷ್ಟು ಸುಲಭವಾಗಿ ಇದು ಬಗೆಹರಿ ಯುವುದಿಲ್ಲ. ೨೦ ವೇಕೆನ್ಸಿಗಳು ಬೀಳುವವರೆಗೆ ಆ ಜಾಗಗಳನ್ನು ೧೦ ವರ್ಷದವರೆಗೆ ಹಾಗೆಯೇ ಖಾಲಿ ಮಡಗಬೇಕು ಎಂದು ಹೇಳುತ್ತೀರಾ? ಯಾವುದಾದರೂ ಒಂದು ಡಿಪಾರ್ಟ್‌ಮೆಂಟಿನಲ್ಲಿ ಈ ವರ್ಷ ಎರಡು ವೇಕೆನ್ಸಿ ಬಿದ್ದರೆ, ಮುಂದಿನ ವರ್ಷ ವೇಕೆನ್ಸಿ ಬೀಳದೆ ಇರಬಹುದು. ಬೀಳುವವರೆಗೂ ೫, ೧೦, ೨೦ ವರ್ಷದವರೆಗೂ ವೇಕೆನ್ಸಿಗೋಸ್ಕರ ಕಾದುಕೊಂಡು ಕುಳಿತುಕೊಳ್ಳಬೇಕಾಗುತ್ತದೆ. ಇವರಿಗೆ ಅನುಕೂಲ ಮಾಡಬೇಕು ಎಂದು ಪೂಲ್ ಮಾಡಿದ್ದೇವೆ. ನಿಮ್ಮ ಅಭಿಪ್ರಾಯ, ಮೂರಂ ವೇಕೆನ್ಸಿಗಳಲ್ಲಿ ನಿಮಗೆ ಒಂದಂ

(ಶ್ರೀ ಡಿ. ದೇವರಾಜ್ ಅರಸ್)

ಸಿಕ್ಕರೆ ಸಾಕು ಎಂದು. ಮೂರು ವೇಕೆನ್ಸಿಗಳಲ್ಲಿ ಒಂದು ನಿಮಗೆ ಸಿಕ್ಕರೆ, ಬ್ಯಾಕ್‌ವರ್ಡ್ ಕ್ಲಾಸ್ ಜನರಿಗೆ ಜೀರೋ ಆಯಿತು. ಅವರಿಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ.

The percentage formula which has been enunciated by the courts, namely, 51 and 49 or 52 and 48, cannot be implemented because if it is 3, one is for the scheduled castes. What about the two others? If we give one for backwardclass and one for merit, it will be 1/3 only. If it is 1/3, it goes against the decision. It may be the hon. member may be feeling that wherever there are three vacancies, he will get one and two for other classes. It will not be so. All the vacancies of all the departments pooled together will obviate this difficulty or the injustice that is likely to happen to different classes. As I said earlier the only way to see that the schduled castes come up is to club all the vacancies into a pool. Under the present arrangement it might so happen that in some departments like the Revenue or the G. A. D. or Police or Excise some scheduled castes persons are not likely to come in. For looking into that I have already said that a sub-committee is constituted and they will give their recommendation. I will do my best to solve that difficulty.

Lathi charge on farmers of Madarkal Village

(92) **Sri Bapu Gowda** (Shahapur) —

Will the Chief Minister be pleased to state :—

(*a*) whether there was any lathi charge in village Madarkal in Shahpur Taluk;

(*b*) if so, the compelling reasons for resorting to tear gas and lathi charge;

(*c*) the number of farmers injured as a result of lathi charge;

(*d*) the number of persons arrested ?

Sri D. Devaraj Urs (Chief Minister).—

(*a*) Yes.

(*d*) The mob did not disperse inspite of repeated warnings but indulged in pelting stones and caussing injuries to Government servants and damage to property. The mob was also determined to obstruct the Government servants in discharging their official duties. Hence the Police were compelled to use minimum force to disperse the mob.

(*c*) 9 persons.

(*d*) 21 persons.

ಶ್ರೀ ಬಾಪೂಗೌಡ.— ತಾವು ನನ್ನ (ಅ) ಪ್ರಶ್ನೆಗೆ ಮದರಕಲ್ ಗ್ರಾಮನಲ್ಲಿ ಲಾಠಿ ಪ್ರಹಾರವೇನಾದರೂ ನಡೆದಿದ್ದತೇ ಎಂದು ಕೇಳಿದ್ದಕ್ಕೆ ಉತ್ತರವಾಗಿ 'ಹೌದು' ಎಂದು ಹೇಳಿದ್ದೀರಿ, ಅಲ್ಲಿ ಲಾಠಿ ಚಾರ್ಜ್ ಆಗತಕ್ಕ ಪ್ರಮೇಯ ಏನು ಇತ್ತು ?